(ಇಂದು ದಿನಾಂಕಃ 05-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ VRM ವಕೀಲರಿಂದಃ</u>**

ಮೃತ ಚಿಂಟು ನನ್ನ ಮಗ. ಆತ ತೀರಿ ಹೋದಾಗ ಆತನಿಗೆ 22 ವರ್ಷ ವಯಸ್ಸಾಗಿತ್ತು. ಕಿಶನ ತಂದೆ ದಾಸೂ ನಾಯಕ ಚೌವಾಣ ನಮ್ಮ ಸಂಬಂಧಿ ಎಂದರೆ ಸರಿ. ದಿನಾಂಕ 13.04.2023 ರಂದು ಸದರಿ ಕಿಶನ ಪೊಲೀಸರ ಮುಂದೆ ಒಂದು ಹೇಳಿಕೆ ನೀಡಿದರು ಎಂದರೆ ಸರಿ. ಸದರಿ ಹೇಳಿಕೆ ಪ್ರಕಾರ ನಾನು ಜಮೀನಿನಲ್ಲಿ ಕೆಲಸ ಇದೆ ಎಂದು ಕಿಶನರವರ ಟ್ರ್ಯಾಕ್ಟರ ತೆಗೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ. ದಿನಾಂಕ 07.03.2023 ರಂದು ನಮ್ಮ ಜಮೀನಿನಲ್ಲಿ ಟ್ರ್ಯಾಕ್ಟರನಿಂದ ಕೆಲಸ ಮಾಡುತ್ತಿರುವಾಗ ಅಂದರೆ ಕೆಂಪು ಕಲ್ಲುಗಳನ್ನು ತುಂಬಿಕೊಂಡು ಬರುತ್ತಿರುವಾಗ ನನ್ನ ಮಗ ಚಿಂಟು ಟ್ರ್ಯಾಕ್ಟರನ್ನು ಚಾಲನೆ ಮಾಡಿ ಅಪಘಾತ ಪಡಿಸಿದರು ಎಂದರೆ ಸರಿಯಲ್ಲ. ನನ್ನ ಮಗ ಟ್ರ್ಯಾಕ್ಟರ ಚಾಲನೆ ಮಾಡುತ್ತಿದ್ದ ಮತ್ತು ಟ್ರ್ಯಾಕ್ಟರನಲ್ಲಿ ಆತ ಒಬ್ಬನೆ ಇದ್ದ. ನನ್ನ ಮಗ ಕಿಶನ ತಂದೆ ದಾಸೂ ನಾಯಕ ಚೌವಾಣ ರವರ ಬಳಿ ಕೆಲಸ ಮಾಡುತ್ತಿರಲಿಲ್ಲ, ಟ್ರ್ಯಾಕ್ಟರ ಮೂಲಕ ನಮ್ಮ ಜಮೀನಿನಲ್ಲಿ ಕೆಲಸ ಮಾಡುವಾಗ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಆ ಕಾರಣದಿಂದ ಕಿಶನರವರು ಪೊಲೀಸರ ಮುಂದೆ ನೀಡಿದ್ದ ಹೇಳಿಕೆಯನ್ನು ಈ ಅರ್ಜಿಯಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಕಿಶನರವರ ಬಳಿ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ. ಅಪಘಾತ ಆದ ನಂತರ ಪರಿಹಾರ ಕೊಡುವಂತೆ ನಾನು 1 ನೇ ಎದುರುದಾರನ ಬಳಿ ಹೋಗಿದ್ದೆ. ನನ್ನ ಮಗನಿಗೆ ಅಪಘಾತ ಆಗಿದೆ ಪರಿಹಾರ ಕೊಡಿ ಎಂದು ಅವರ ಬಳಿ ಲಿಖಿತವಾಗಿ ಅರ್ಜಿ ಕೊಟ್ಟಿಲ್ಲ. 1 ನೇ ಎದುರುದಾರ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಮತ್ತು ಚಿಂಟು ಆತನ ಬಳಿ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಪೋಲೀಸರಿಗೆ ನಾನೇ ದೂರು ನೀಡಿದ್ದೆ. ದೂರಿನಲ್ಲಿ ನನ್ನ ಮಗ ಚಿಂಟು ಕಿಶನರವರ ಬಳಿ ಕೆಲಸ ಮಾಡುತ್ತಿದ್ದ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ಚಿಂಟು ಕಿಶನರವರ ಬಳಿ ಯಾವತ್ತೂ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ

ಚಿಂಟು ಕಿಶನರವರ ಬಳಿ ಕೆಲಸ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಿಂಟುವಿನ ಮೂಲ ಡಿ.ಎಲ್. ನಮ್ಮ ಮನೆಯಲ್ಲಿದೆ. ನನ್ನ ಗಂಡನ ಹೆಸರು ರಾಮಶೆಟ್ಟಿ. ನಿ.ಪಿ-10 ರಲ್ಲಿ ರಾಠೋಡ ಚಿಂಟು ತಂದೆ ರಾಜಶೆಟ್ಟಿ ಎಂದು ಇದೆ ಎಂದರೆ ಸರಿಯಲ್ಲ. ನಿ.ಪಿ-10 ನನ್ನ ಮಗ ಚಿಂಟುನ ಡಿ.ಎಲ್. ಅಲ್ಲ ಅದು ಬೇರೆಯವರ ಡಿ.ಎಲ್. ಎಂದರೆ ಸರಿಯಲ್ಲ. ನನ್ನ ಮಗನಿಗೆ 22 ವರ್ಷ ವಯಸ್ಸಾಗಿತ್ತು ಆತ 1 ನೇ ಎದುರುದಾರನ ಟ್ರ್ಯಾಕ್ಟ್ರರ ಮೇಲೆಚಾಲಕನಾಗಿ ಕೆಲಸ ಮಾಡುತ್ತಿದ್ದ ಮತ್ತು ತಿಂಗಳಿಗೆ 30 ಸಾವಿರ ಸಂಬಳ ಪಡೆದುಕೊಳ್ಳುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಪ್ರತಿದಿನ 1 ನೇ ಎದುರುದಾರ 200 ರೂ. ಭತ್ತ ಕೊಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆಸರಿಯಲ್ಲ. ನಾವಿಬ್ಬರುಅರ್ಜಿದಾರರು ಮೃತನ ಆದಾಯದ ಮೇಲೆ ಅವಲಂಬಿತರು ಆಗಿರಲಿಲ್ಲ ಎಂದರೆ ಸರಿಯಲ್ಲ.ನಮ್ಮ ಜಮೀನಿನಲ್ಲಿಕೆಲಸ ಮಾಡುವಾಗ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಮಗೆ ಜಮೀನು ಇಲ್ಲ ಎಂದು ಹೇಳುತ್ತಾರೆ. ಚಿಂಟು 1 ನೇ ಎದುರುದಾರನ ಬಳಿ ಕೆಲಸ ಮಾಡುತ್ತಿರುವಾಗ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.